5

# ನೂತನ ಒಪ್ಪಂದ

*"ಯೆಹೋವನು ಇಂತೆನ್ನುತ್ತಾನೆ, 'ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು' " (ಯೆರೆಮೀಯ 31:31).*

*" 'ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು ಎಂದು ಕರ್ತನು ಹೇಳುತ್ತಾನೆ' " (ಇಬ್ರಿಯ 8:8).*

ಕ್ರೈಸ್ತರು ದೇಶದ ಅತ್ಯುತ್ತಮ ನಾಗರಿಕರೊಳಗೆ ಇರಬೇಕು (ರೋಮಾಪುರ 13:1). ಅವರು ಹೊಸದಾದ ಮತ್ತು ಹೆಚ್ಚು ಉತ್ತಮವಾದ ಕಾನೂನುಗಳು ಜಾರಿಗೆ ಬರುವದನ್ನು ಮತ್ತು ಅವು ಬರುವಾಗ ಅವುಗಳನ್ನು ಗೌರವಿಸುವದನ್ನು ನಿರೀಕ್ಷಿಸುವರು, ಆ ಸುಧಾರಣೆಗಳು ಬರುವುದರಲ್ಲಿ ನಿಧಾನವಾದರೆ, ಅವರು ತಾಳ್ಮೆಯಿಂದ ಕಾದುಕೊಂಡಿರುವರು. ಅಗತ್ಯವಾದ ತಿದ್ದುಪಡಿಗಳಿಗಾಗಿ ಯೋಗ್ಯವಾದ ಮಾರ್ಗಗಳ ಮುಖಾಂತರ ಕಾರ್ಯಮಾಡುವರು. ಕಡಿಮೆ ತರಗತಿಯ ಬದಲಾವಣೆಗಳು ಮಾಡಲ್ಪಡುವಾಗ, ಕ್ರೈಸ್ತನು ತನ್ನ ಸಮಾಧಾನಕರ ವಿರೋಧವನ್ನು ದಾಖಲಿಸುವನು ಮತ್ತು ಅವನು ಕೃತಜ್ಞತೆಯುಳ್ಳ, ಕಾನೂನು ಪಾಲಿಸುವ ನಾಗರಿಕನಂತೆ ಜೀವಿಸುತ್ತ ಹೆಚ್ಚು ಪ್ರಯೋಜನಕಾರಿ ಬದಲಾವಣೆ ಮಾಡುವಲ್ಲಿ ತನ್ನ ಸಹಾಯವನ್ನು ಕೊಡುತ್ತಾನೆ.

ಅದರಂತೆಯೇ, ಕ್ರೈಸ್ತನು ಮನುಷ್ಯನೊಂದಿಗೆ ತನ್ನ ವ್ಯವಹಾರಗಳಲ್ಲಿ ದೇವರು ಬದಲಾವಣೆಗಳನ್ನು ಮಾಡಿರುವನೆಂದು ಒಪ್ಪಿಕೊಳ್ಳುತ್ತಾನೆ ಮತ್ತು ಸ್ವೀಕರಿಸುತ್ತಾನೆ; ಆತನ ಬದಲಾವಣೆಗಳು ಪರಿಪೂರ್ಣವಾದವುಗಳೂ ಆತನ ಆತ್ಮಿಕ ಆರ್ಥಿಕತೆಗೆ ಮತ್ತು ಜಗತ್ತಿಗೆ ಒಳ್ಳೆಯವುಗಳೂ ಆಗಿರುವವೆಂದು ಜ್ಞಾಪಿಸಿಕೊಳ್ಳುತ್ತಾನೆ.

ಈ ಕಾರಣದಿಂದ, ದೇವರು ನಮಗೆ ತಂದಿರುವ ಹೊಸ ಒಡಂಬಡಿಕೆಯ ಆನಂದದೊಂದಿಗೆ ನಾವು ಸ್ವೀಕರಿಸತಕ್ಕದ್ದು, ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನದಿಂದ, ಆತನು ತನ್ನ ನಿಯಮವನ್ನು ಇಲ್ಲವೇ ಒಡಂಬಡಿಕೆಯನ್ನು ಬದಲಾಯಿಸಿರುವನು. ಪಂಚಾಶತ್ತಮ ದಿನದಂದು ತನ್ನ ಪೂರ್ಣತೆಯಲ್ಲಿ ಸುವಾರ್ತೆಯು ಸಾರಲ್ಪಟ್ಟಾಗ ಈ ಬದಲಾವಣೆಯು ಪ್ರಕಟಿಸಲ್ಪಟ್ಟಿತು.

ದೇವರ ಹೊಸ ಒಡಂಬಡಿಕೆಯು ತರಲ್ಪಡುವುದು ಯೋಜಿಸಲ್ಪಟ್ಟಿತು ಮತ್ತು ಪ್ರವಾದಿಸಲ್ಪಟ್ಟು ಇತ್ತು. ಮಾನವನೊಂದಿಗೆ ತನ್ನ ಸಂಬಂಧವನ್ನು ಸುಧಾರಿಸಲು ದೇವರ ಪ್ರಯೋಗ - ಮತ್ತು ತಪ್ಪಿನ ಪ್ರಯತ್ನಗಳ ಪರಿಣಾಮವಾಗಿರಲಿಲ್ಲ; ಅದು ಜಗತ್ತಿನ ರಕ್ಷಣೆಗಾಗಿ ದೇವರ ದಯೆಯ ಯೋಜನೆಯ ಭಾಗವಾಗಿತ್ತು. ಇಸ್ರಾಯೇಲಿನೊಂದಿಗೆ

ಹಳೇ ಒಡಂಬಡಿಕೆಯು ಮಾಡಲ್ಪಟ್ಟಿದ್ದು, ಯೋಗ್ಯವಾದ ಸಮಯವು ಬರುವವರೆಗೆ ಆತನ ಪರಿಶುದ್ಧ ಉದ್ದೇಶಕ್ಕಾಗಿ ಉಪಯೋಗಿಸಲ್ಪಡುತ್ತಿತ್ತು. ಉದ್ದೇಶಿಸಲ್ಪಟ್ಟಂತೆ, ಕಾಲದ ಪರಿಪೂರ್ಣತೆಯಲ್ಲಿ, ಒಂದು ಹೊಸ ಒಡಂಬಡಿಕೆಯು - ಯೇಸುವಿನ ರಕ್ತದಿಂದ ಮನ್ನಿಸಲ್ಪಟ್ಟಿದ್ದ ಅದರ ಸ್ಥಾನಕ್ಕೆ ಬದಲಾಗಿ ಇಡಲ್ಪಟ್ಟಿತು (ಇಬ್ರಿಯ 8:7, 13).

ಈ ಹೊಸ ಒಪ್ಪಂದವು ಬರುವದನ್ನು ಯೆರೆಮೀಯನು ಮುಂತಿಳಿಸಿದನು. ಎಲ್ಲಾ ನಿರೀಕ್ಷೆಯು ಕಳೆದು ಹೋಗಿದೆ ಎಂದು ತೋರಿದ ಸಮಯದಲ್ಲಿ, ದೇವರು ಯೆಹೂದ್ಯಕ್ಕೆ ಆಶೀರ್ವಾದ ದಿನದ ದರ್ಶನವನ್ನು ಮತ್ತು ಆತನು ತನ್ನ ಜನರೊಂದಿಗೆ ಸ್ಥಾಪಿಸುವ ಹೆಚ್ಚು ಉತ್ತಮವಾದ ಹೊಸ ಒಡಂಬಡಿಕೆಯ ನಿರೀಕ್ಷೆಯನ್ನು ಕೊಟ್ಟನು. ಯೆರೆಮೀಯನು ಯೆರೂಸಲೇಮಿನ ನಾಶನಕರ ಬೀಳುವಿಕೆಯನ್ನೂ ಬಬಿಲೋನಿನ ಸೆರೆಯವಾ ಸದ ಪ್ರಾರಂಭವನ್ನೂ ನೋಡಿದಾಗ, ಹೊಸ ಒಡಂಬಡಿಕೆಯ ಮಾತುಗಳಲ್ಲಿ ತನ್ನ ಜನರಿಗಾಗಿ ದೇವರು ಸಿದ್ಧಪಡಿಸಿದ ಭವಿಷ್ಯದ ಬಗ್ಗೆ ಬರೆದನು:

> "ಯೆಹೋವನು ಇಂತೆನ್ನುತ್ತಾನೆ - ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ ಹೊಸದಾಗಿರುವ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳುವ ದಿನಗಳು ಬರುವವು; ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈಹಿಡಿದು ಐಗುಪ್ತದೇಶದೊಳಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ; ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿದರಷ್ಟೆ. ಯೆಹೋವನು ಇಂತೆನ್ನುತ್ತಾನೆ - ಆ ದಿನಗಳು ಬಂದಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು - ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡುವೆನು, ಅವರ ಹೃದಯದೊಳಗೆ ಅದನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು; ನೆರೆಹೊರೆಯವರೂ ಅಣ್ಣ ತಮ್ಮಂದಿರೂ ಒಬ್ಬರಿಗೊಬ್ಬರು - ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸ ಬೇಕಾಗಿರುವದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ. ಇದು ಯೆಹೋವನ ನುಡಿ" (ಯೆರೆಮೀಯ 31:31-34),

ಯೆರೆಮೀಯನ ಪ್ರವಾದನೆಯನ್ನು ತಳಹದಿಯಾಗಿ ಉಪಯೋಗಿಸಿ, ಇಬ್ರಿಯ ಬರಹಗಾರನು ಹಳೇ ಮತ್ತು ಹೊಸ ಒಡಂಬಡಿಕೆಯ ಮಧ್ಯದಲ್ಲಿ ವ್ಯತ್ಯಾಸವನ್ನು ಹೇಳಿದನು. ಇಬ್ರಿಯರಿಗೆ ಬರೆದ ಪತ್ರಿಕೆಯು ಹಿಂಸೆಯ ದಿನದಲ್ಲಿ, ಕ್ರೈಸ್ತರು ಕ್ರೈಸ್ತತ್ವಕ್ಕೆ ತಮ್ಮ ಸಮರ್ಪಣೆಯನ್ನು ಕಡೆಗಣಿಸುವ ಮತ್ತು ಯೆಹೂದಿ ಧರ್ಮಕ್ಕೆ ಹಿಂದಿರುಗುವ ಬೋಧನೆಯಲ್ಲಿದ್ದಾಗ ಬರೆಯಲ್ಪಟ್ಟಿತು. ಈ ಎದೆಗುಂದಿದ, ಹೀನಪಡಿಸಲ್ಪಟ್ಟ ಮತ್ತು ಭ್ರಮನಿರಶನಗೊಂಡ ಕ್ರೈಸ್ತರಗೆ, ದೇವರು ತನ್ನ ಜನರೊಂದಿಗೆ ಸ್ಥಾಪಿಸಿದ ಹೊಸದಾದ ಮತ್ತು ಹೆಚ್ಚು ಉತ್ತಮವಾದ ನವೀಕೃತ ಮೆಚ್ಚಿಕೆಯನ್ನು ಕೊಡುವುದರಿಂದ, ಪ್ರೋತ್ಸಾಹಿಸಲು ಲೇಖಕನು ಹುಡುಕಿದನು (ಇಬ್ರಿಯ 8:8-12).

ದೇವರು ಮಾಡಿದ ಈ ನೂತನ ಒಡಂಬಡಿಕೆಯಿಂದ ಸಭೆಯು ಪರಿಣಾಮಗೊಳ್ಳುತ್ತದೆ. ಆದುದರಿಂದ, ಯೆರೆಮೀಯನ ಪ್ರವಾದನೆಯಲ್ಲಿ ಕೊಡಲ್ಪಟ್ಟ ಈ ಒಡಂಬಡಿಕೆಯ ವಿವರಣೆಯ ಕಡೆಗಿನ ಒಂದು ನೋಟವು ಸಭೆಯ ಸ್ವಭಾವದ ಕಡೆಗೆ ಇನ್ನೊಂದು ನೋಟವನ್ನು ಕೊಡುವುದು.

# ಒಂದು ನೂತನ
# ನಂಬಿಗಸ್ತಿಕೆ

ಹಳೇ ಮತ್ತು ಹೊಸ ಒಡಂಬಡಿಕೆಗಳ ಮಧ್ಯದಲ್ಲಿ ಒಂದು ಪ್ರಮುಖ ವ್ಯತ್ಯಾಸವು, ಯೆರೆಮೀಯನ ಪ್ರವಾದನೆಗೆ ಅನುಗುಣವಾಗಿ, ದೇವರ ಯೋಜನೆಯಲ್ಲಿ ಹೃದಯದ ಸ್ಥಾನವಾಗಿದೆ. "ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿ ಇಡುವೆನು, ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು" (ಇಬ್ರಿಯ 8:10ಬಿ) ಎಂದು ದೇವರು ಹೇಳಿದನು. ದೇವರು, ತನ್ನ ಹೊಸ ಒಪ್ಪಂದದಲ್ಲಿ, ಪ್ರತಿಯೊಬ್ಬ ಕ್ರೈಸ್ತನಲ್ಲಿ ಒಂದು ನೂತನ ನಂಬಿಗಸ್ತಿಕೆಯನ್ನು ಪ್ರೇರೇಪಿಸುತ್ತಾನೆ. ಸಭೆಯು ದೇವರ "ನೂತನ ಹೃದಯದ" ಜನಾಂಗವಾಗಿದೆ.

ದೈಹಿಕ ಜನನದಿಂದ ಒಬ್ಬನು ಹಳೇ ಒಡಂಬಡಿಕೆಯನ್ನು ಪ್ರವೇಶಿಸಿದನು. ಅವನು *ಆತ್ಮಿಕ ನಿರ್ಣಯದಿಂದ* ಅಲ್ಲ, ಆದರೆ *ಕುಟುಂಬ ಸಂತತಿಯಿಂದ* ಇಸ್ರಾಯೇಲನಾಗಿದ್ದನು. ಅದರ ಪರಿಣಾಮವಾಗಿ, ಪ್ರತಿಯೊಬ್ಬ ಯೆಹೂದ ಮಗುವು ದೇವರೊಂದಿಗೆ ತನ್ನ ಸಂಬಂಧವನ್ನು ಕುರಿತು ಕಲಿಸಲ್ಪಡುವ ಅಗತ್ಯತೆಯುಳ್ಳದ್ದಾಗಿತ್ತು. ಜನನದಲ್ಲಿ ಯೆಹೂದಿ ಮಗುವು ದೇವರೊಂದಿಗೆ ಒಂದು ವಿಶೇಷ ಒಡಂಬಡಿಕೆಯಲ್ಲಿ ಪ್ರವೇಶಿಸು ವಾಗ, ಅವನು ಅದನ್ನು ತಿಳಿದಿರಲಿಲ್ಲ ಇಲ್ಲವೇ ಅವನ ತಂದೆತಾಯಿಗಳಿಂದ ಅವನು ಯೋಗ್ಯವಾಗಿ ಕಲಿಸಲ್ಪಡುವವರೆಗೆ ಅದರ ಅರ್ಥ ಮಾಡಿಕೊಂಡಿರುತ್ತಿರಲಿಲ್ಲ. ಮಕ್ಕಳು ಅವರು ಯಾರಾಗಿದ್ದರೆಂಬದನ್ನು ಬೋಧಿಸಲ್ಪಡುವದಷ್ಟೇ ಅಲ್ಲ, ಆದರೆ ಎಲ್ಲಾ ಇಸ್ರಾಯೇಲ್ಯರಿಗಾಗಿ ಅವರನ್ನು ತನ್ನ ಆಯ್ದುಕೊಂಡ ಜನಾಂಗವನ್ನಾಗಿ ಆಯ್ಕೆಮಾಡಿಕೊಂಡ ಯೆಹೋವ ದೇವರ ಕಡೆಗೆ ಅವರ ಹಂಗುಗಳನ್ನು ಮತ್ತು ಆತನ ಕಡೆಗಿರುವ ಹೊಂದಾಣಿಕೆಯನ್ನು ಜ್ಞಾಪಿಸಿಕೊಳ್ಳಲು, ಸತತವಾದ ಬೋಧನಾ ಕಾರ್ಯವು ಮುಂದುವರಿಸಲ್ಪಟ್ಟಿತು.

ಹೀಗಿರುವಾಗ, ಹೊಸ ಒಡಂಬಡಿಕೆಯು ಆತ್ಮಿಕ ಜನನದಿಂದ ಪ್ರವೇಶಿಸಲ್ಪಡುತ್ತಿತ್ತು. ಇದು ದೇವರ ಚಿತ್ತವನ್ನು ಸ್ವೀಕರಿಸುವದನ್ನು ಮತ್ತು ಆತನಿಗೆ ವಿಧೇಯ ನಂಬಿಕೆಯಲ್ಲಿ ಉತ್ತರವನ್ನು ಕೊಡುವುದನ್ನು ಒಳಗೊಂಡಿತ್ತು. ನೂತನ ಜನನವು ದೇವರ ಬಗ್ಗೆ ಜ್ಞಾನವಿಲ್ಲದೇ ಹಾಗೂ ಆತನ ಆತ್ಮಿಕ ರಾಜ್ಯವನ್ನು ಪ್ರವೇಶಿಸಲು ಮನಃಪೂರ್ವಕವಾದ ತೀರ್ಮಾನವಿಲ್ಲದೇ ಸಂಭವಿಸುವದಕ್ಕಾಗುವದಿಲ್ಲ (ಯೋಹಾನ 6:44, 45). ದೇವರ ರಾಜ್ಯದಲ್ಲಿರುವ ಪ್ರತಿಯೊಬ್ಬನು ರಕ್ಷಣೆಯ ಸಂದೇಶವನ್ನು ಕೇಳಿರುವನು (ರೋಮಾಪುರ 10:17), ಆ ಸಂದೇಶವನ್ನು ಸ್ವೀಕರಿಸಿಕೊಂಡು ಒಪ್ಪಿಕೊಂಡಿರುವನು (ಅಪೊಸ್ತಲರ ಕೃತ್ಯಗಳು 2:41), ಮತ್ತು ನಂಬಿಕೆಯಿಂದಲೂ ವಿಧೇಯತೆಯಿಂದಲೂ ಆ ಸಂದೇಶದ ಮೇಲೆ ಕಾರ್ಯ ಮಾಡುವದನ್ನು ಆಯ್ಕೆ ಮಾಡಿಕೊಂಡಿರುವನು (ಅಪೊಸ್ತಲರ ಕೃತ್ಯಗಳು 2:40).

ಒಂದು ನಿಯಮವು ಹೃದಯದ ಮೇಲೆ ಬರೆಯಲ್ಪಡುವುದು ಎಂದರೆ ಅರ್ಥವೇನಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕಿಂಡರ್ ಗಾರ್ಟನ್ನಿಗೆ ಹೋಗುವ ಮಗುವಿನ ತಾಯಿಯನ್ನು ಯೋಚಿಸಿರಿ. ತನ್ನ ಮಗುವಿನ ಶಾಲೆಯ ಮುಂದಿರುವ ಬಹಳಷ್ಟು ವಾಹನ ಸಂಚಾರವಿರುವ ಬೀದಿಯಲ್ಲಿ ಆಕೆ ತನ್ನ ಕಾರನ್ನು ಓಡಿಸುವಾಗ, ಆಕೆ "ನಿಧಾನ - ಮಕ್ಕಳು ಆಟದಲ್ಲಿದ್ದಾರೆ" ಎಂದು ಬರೆದ ಸೂಚಕ ಫಲಕವನ್ನು ನೋಡುತ್ತಾಳೆ. ಈ ತಾಯಿ ಏನು ಮಾಡುತ್ತಾಳೆ? ಆಕೆ ಸೂಚಿತ ಫಲಕವನ್ನು ಕಡೆಗಣಿಸಿ ಮಿತಿಯಿಲ್ಲದ ವೇಗದಿಂದ ಕಾರನ್ನು ಓಡಿಸುವಳೋ? ತನಗೆ ಆತಂಕವೊಡ್ಡುವ ಈ ಫಲಕದ ಬಗ್ಗೆ ದೂರು ನೀಡುವಳೋ? ಇಲ್ಲ. ವೇಗ ಮಿತಿಗೆ ತನ್ನ ಕಾರನ್ನು ಜಾಗರೂಕತೆಯಿಂದ ನಿಧಾನವಾಗಿ

ಸುವಳು. ತನ್ನ ಮಗುವು, ತನ್ನ ಹೃದಯದ ಪ್ರೀತಿಯ ಮಗುವು ಆ ಶಾಲೆಯ ಆಟದ ಮೈದಾನದಲ್ಲಿ ಆಡುತ್ತಿರುವುದೆಂದು ಆ ತಾಯಿಗೆ ತಿಳಿದಿರುವುದು. ನಿಯಮವು ತನ್ನ ಮಗುವಿನಂಥ ಮಕ್ಕಳ ರಕ್ಷಣೆಗಾಗಿ ಇರುವುದೆಂದು ತಿಳಿದಿರುವಳು. ಸತ್ಯದಲ್ಲಿ ನಿದಾನವಾಗಿ ಕಾರು ನಡಿಸಬೇಕೆಂದು ಹೇಳುವ ನಿಯಮದ ಅಗತ್ಯತೆ ಅಗತ್ಯವಿರುವುದಿಲ್ಲ. ತನ್ನ ಮಗುವಿಗಾಗಿ ಮತ್ತು ಇತರ ಎಲ್ಲಾ ಮಕ್ಕಳಿಗಾಗಿ ಆಕೆ ಅತ್ಯುತ್ತಮವಾದದ್ದನ್ನು ಬಯಸುತ್ತಾಳೆ, ತನಗೆ ತನ್ನ ಮಗುವು ಎಷ್ಟು ಅಮೂಲ್ಯವಾದದ್ದಾಗಿದೆ ಮತ್ತು ಇತರ ಮಕ್ಕಳು ತಮ್ಮ ತಂದೆತಾಯಿಗಳಿಗೆ ಅಷ್ಟೇ ಅಮೂಲ್ಯರಾಗಿದ್ದಾರೆ ಎಂಬುದನ್ನು ಆಕೆ ತಿಳಿದಿರುವಳು, ಈ ತಾಯಿಯು ನಿಜವಾಗಿಯೂ ವಾಹನ ಸಂಚಾರವನ್ನು ನಿಧಾನಗೊಳಿಸುವ ಆ ಸಂಕೇತಕ್ಕಾಗಿ ಬಹಳ ಕೃತಜ್ಞಳಾಗಿರುವಳು. ಅಂಥ ಸಂಕೇತವು ಶಾಲೆಯ ಹತ್ತಿರ ಹಾಕಲ್ಪಟ್ಟಿರದಿದ್ದರೆ ಅಂಥ ಸಂಕೇತವು ಕೂಡಲೇ ಹಾಕಲ್ಪಡಬೇಕೆಂದು ಒತ್ತಾಯಿಸಿ ಹೋರಾಟ ನಡಿಸುವಳು, "ನಿದಾನಿಸಿ - ಮಕ್ಕಳು ಆಟದಲ್ಲಿದ್ದಾರೆ" ನಿಯಮವು ತನ್ನ ಮಗುವಿಗಾಗಿರುವ ಪ್ರೀತಿಯಿಂದ ಮತ್ತು ಆ ಮಗುವಿನ ಪೋಷಣೆಗೆ ತನ್ನ ಸಮರ್ಪಣೆಯಿಂದ ತಾಯಿಯ ಹೃದಯದ ಮೇಲೆ ಬರೆಯಲ್ಪಟ್ಟಿದೆ.

ಕ್ರೈಸ್ತರ ಹೃದಯಗಳ ಮೇಲೆ ದೇವರ ನಿಯಮಗಳು ಬರೆಯಲ್ಪಟ್ಟಿರುತ್ತವೆ. ನಂಬಿಕೆಯ ಮತ್ತು ಪ್ರೀತಿಯ ಬಲವನ್ನು ಹುಟ್ಟಿಸುವುದರಿಂದ ಆತನ ಚಿತ್ತವನ್ನು ಮಾಡಲು ನಾವು ಪ್ರೋತ್ಸಹಿಸಲ್ಪಡುತ್ತೇವೆ (1 ಯೋಹಾನ 5:3). ಆತನ ಸಂದೇಶವು ಪ್ರಾರಂಭದಲ್ಲಿ ನಮ್ಮ ಹೃದಯಗಳಲ್ಲಿ ನಂಬಿಕೆಯನ್ನೂ ವಿಧೇಯತೆಯನ್ನೂ ಹುಟ್ಟಿಸಿತು; ಆ ಸಂದೇಶಕ್ಕೆ ನಂಬಿಕೆಯ ಉತ್ತರವಾಗಿ ನಾವು ಆತನ ಮಕ್ಕಳಾದೆವು. ಸತತವಾಗಿ ಆತನ ವಾಕ್ಯದ ಮೇಲೆ ಧ್ಯಾನ ಮಾಡುವುದರಿಂದ, ಆತನ ಪ್ರೀತಿ ಮತ್ತು ಕೃಪೆಯ ಮೇಲೆ ಧ್ಯಾನ ಮಾಡುವುದರಿಂದ, ಆತನ ಚಿತ್ತಕ್ಕೆ ನಮ್ಮ ಹೃದಯಗಳನ್ನು ತೆರೆದಿಡುವುದರಿಂದ, ಮತ್ತು ಆತನೊಂದಿಗೆ ಅನುದಿನವೂ ನಡೆಯುವುದರಿಂದ ನಮ್ಮ ನೂತನ ಹೃದಯಗಳನ್ನು ಕಾಪಾಡಿಕೊಳ್ಳುತ್ತೇವೆ.

## ಒಂದು ನೂತನ ಕ್ಷಮಾಪಣೆ

ಎರಡು ಒಡಂಬಡಿಕೆಗಳ ಮಧ್ಯದಲ್ಲಿಯ ಇನ್ನೊಂದು ವ್ಯತ್ಯಾಸವು ದೇವರು ಕೊಡುವ ಕ್ಷಮಾಪಣೆಯಲ್ಲಿ ಕಂಡುಬರುತ್ತದೆ. ಆತನ ನೂತನ ಒಡಂಬಡಿಕೆಯಲ್ಲಿ ಪ್ರವೇಶಿಸುವವರಿಗೆ ದೇವರು ಹೀಗೆ ಹೇಳಿದ್ದಾನೆ, "ನಾನು ಅವರ ದುಷ್ಕೃತ್ಯಗಳ ವಿಷಯವಾಗಿ ಕ್ಷಮೆಯುಳ್ಳವನಾಗಿರುವೆನು, ಅವರ ಪಾಪಗಳನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ" (ಇಬ್ರಿಯ 8:12). ಹೊಸ ಒಡಂಬಡಿಕೆಯ ಈ ವಿಷಯವನ್ನು "ಒಂದು ನೂತನ ಕ್ಷಮಾಪಣೆ" ಎಂದು ನಾವು ಕರೆಯ ಬಹುದು. ಸಭೆಯು ದೇವರಿಂದ ನಿಜವಾದ ಪಾಪದ ಶುದ್ಧೀಕರಣ ಹೊಂದಿದವರ ಜನಾಂಗವಾಗಿದೆ.

ದೇವರು ತನ್ನ ಜನರ ಪಾಪಗಳಿಗಾಗಿ ಹಳೇ ಒಡಂಬಡಿಕೆಯ ಅಧೀನತೆಯಲ್ಲಿ ಒಂದು ರೀತಿಯ *ಪ್ರಗತಿಪರ* ಮಾರ್ಗವನ್ನು ಒದಗಿಸಿಕೊಟ್ಟನು. ಮೋಶೆಯ ಧರ್ಮಶಾಸ್ತ್ರದ ಅಧೀನತೆಯಲ್ಲಿ, ಪಾಪವು ಪ್ರತೀವರ್ಷ ದೋಷಪರಿಹಾರಕ ಮಹಾದಿನದಂದು ಅರ್ಪಿಸಿದ ಪ್ರಾಣಿ ಯಜ್ಞಗಳ ಮುಖಾಂತರ ಮುಂದಕ್ಕೆ ಉರುಳಿಸಲ್ಪಟ್ಟಿತು (ಯಾಜಕಕಾಂಡ 16). ಮೋಶೆಯ ಧರ್ಮಶಾಸ್ತ್ರದಿಂದ ಅಗತ್ಯವಾದದ್ದು ಕ್ರಿಸ್ತನು ಬಂದು, ಒಂದೇ ಸಲ ಎಲ್ಲಾ ಸಮಯಕ್ಕಾಗಿ ಪಾಪಕ್ಕೆ ಸಾಯುವವರೆಗೆ ಸಾಕಷ್ಟಾಗಿತ್ತು (ಇಬ್ರಿಯ 9:15). ಯೇಸುವು ಶಿಲುಬೆಯ ಮೇಲೆ ಮರಣಹೊಂದಿ, ಸಂಪೂರ್ಣ ಕ್ಷಮಾಪಣೆಯನ್ನು ತರುವವರೆಗೆ ನಿಜವಾದ ದೋಷಪರಿಹಾರವು (ನಿರೀಕ್ಷಣೆಯಲ್ಲಿ ಹೊರತುಪಡಿಸಿ) ಅವರದಾಗಿರಲಿಲ್ಲ.

ಈಗ, ಹೊಸ ಒಡಂಬಡಿಕೆಯ ಅಧೀನತೆಯಲ್ಲಿ, ಕ್ಷಮಾಪಣೆಯು ಪೂರ್ಣತೆಯಲ್ಲಿ ಲಭ್ಯವಿರುತ್ತದೆ. ಪಾಪಕ್ಕಾಗಿ ಪರಿಪೂರ್ಣ ಯಜ್ಞವು ಯೇಸುವಿನಿಂದ ಮಾಡಲ್ಪಟ್ಟಿದೆ. ನಮ್ಮ ದೊಡ್ಡ ಮಹಾಯಾಜಕನಂತೆ ಆತನು ಪರಲೋಕವನ್ನು ಪ್ರವೇಶಿಸಿದ್ದಾನೆ, ನಮ್ಮ ಪಾಪಗಳ ಕ್ಷಮಾಪಣೆಗಾಗಿ ನಾವು ಕೇಳುವಾಗ ನಮಗಾಗಿ ವಿಜ್ಞಾಪನೆ ಮಾಡಲು ದೇವರ ಬಲಗಡೆಯಲ್ಲಿ ಆಸೀನನಾಗಿರುತ್ತಾನೆ (1 ಯೋಹಾನ 2:1). ಇಂದಿನ ವಾಸ್ತವಿಕತೆಯಂತೆ ಕ್ಷಮಾಪಣೆಯು ಕೊಡಲ್ಪಡುತ್ತದೆ. ಆದರೆ ಭವಿಷ್ಯದಲ್ಲಿ ಒಂದು ದಿನ ಅರ್ಪಿಸಲ್ಪಡುವ ದೋಷ ಪರಿಹಾರಿಕ ಯಜ್ಞದ ನಿರೀಕ್ಷಣೆಯಲ್ಲಿ ಅಲ್ಲ. ನಾವು ಕ್ರಿಸ್ತನಲ್ಲಿ, "ನೀತಿವಂತ ರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪವಿಮೋಚನೆಯ ಮೂಲಕವಾಗಿ ಆಗುವುದು" (ರೋಮಾಪುರ 3:24).

---

*ಹೊಸ ಒಡಂಬಡಕೆಯ ಅಧೀನತೆಯಲ್ಲಿ*
*ದೇವರೊಂದಿಗಿನ ನಮ್ಮ ಸಂಬಂಧವು*
*ಹಳೇ ಒಡಂಬಡಿಕೆಯು, ಒದಗಿಸಿದ್ದಕ್ಕಿಂತ*
*ಹೆಚ್ಚು ನಿಕಟವಾದದ್ದೂ ವೈಯಕ್ತಿವಾದದ್ದೂ ಆಗಿರುತ್ತದೆ.*

---

ತೀರಿಸಲಿಕ್ಕಾಗದಷ್ಟು ದೊಡ್ಡ ಮೊತ್ತದ ಸಾಲವನ್ನು ತೆಗೆದು ಕೊಂಡಿರುವಿರೆಂದು ತಿಳಿದುಕೊಳ್ಳಿರಿ. ಸಾಲದ ಮೊತ್ತವು ದೊಡ್ಡದಾಗಿದ್ದು, ನಿನ್ನ ಜೀವನದ ಉಳಿದ ಸಮಯದಲ್ಲಿ ಅದಕ್ಕೆ ಬಡ್ಡಿಯನ್ನು ಕೊಡುತ್ತಾ ಹೋಗುವುದು ಅತ್ಯುತ್ತಮವಾದ ದ್ದಾಗಿದೆ. ನೀವು ಸಾಯುವಾಗ ನಿಮಗೆ ಸಾಲಕೊಟ್ಟವರ ಅಪಕೃಪೆಯಲ್ಲಿ ನೀವಿರುವಿರಿ. ಯಾಕಂದರೆ ನಿಮ್ಮ ಸಾಲದ ದೊಡ್ಡ ಭಾಗವನ್ನು ನೀವಿನ್ನೂ ಕೂಡ ಬೇಕಾಗಿರುವುದು. ಈ ಸಾಲಗಾರನಾಗಿರುವುದು ನಿನ್ನ ಆಕಾಶಗಳಿಂದ ಸೂರ್ಯನ ಬೆಳ ಕನ್ನು ತೆಗೆದು ಹಾಕುವುದು; ಸುಂದರವಾದ ಕನಸಾಗಿರುವುದರ ಬದಲು, ಜೀವನವು ಸಹಿಸಲಾರದಂಥ ದುಸ್ವಪ್ನವಾಗುವುದು.

ಕೋಟ್ಯಾಧಿಪತಿಯೊಬ್ಬನು ನಿಮ್ಮನ್ನು ಉಳಿಸುವುದಕ್ಕೆ ಬಂದು, "ನಿಮ್ಮ ಸಾಲದ ಮೇಲೆ ಪ್ರತೀವರ್ಷ ಬಡ್ಡಿಯನ್ನು ಕೊಡುವೆನು ಮತ್ತು ನಿಮಗೆ ಸಾಲಕೊಟ್ಟವರೊಂದಿಗೆ ಒಳ್ಳೇ ರೀತಿಯಲ್ಲಿ ಇರುವಂತೆ ನೋಡಿಕೊಳ್ಳುವೆನು. ನಿಮ್ಮ ಮರಣದ ನಂತರ, ಅಸಲನ್ನೂ ಸಹ ಕೊಟ್ಟು ತೀರಿಸುವೆನು!" ಎಂದು ಹೇಳುವನೆಂದು ಕಲ್ಪಿಸಿಕೊಳ್ಳಿರಿ. ಇದು ಶುಭ ಸಮಾಚಾರ, ಆದರೆ ಇನ್ನೂ ನೀವು ನಿಮ್ಮ ಜೀವನದ ಉಳಿದ ಭಾಗದಲ್ಲಿ ಸಾಲಗಾರರಾಗಿಯೇ ಜೀವಿಸಬೇಕಾಗುತ್ತದೆ. ನೀವು ಮರಣ ಹೊಂದುವವರೆಗೆ ನಿಮ್ಮ ಸಾಲದಿಂದ ವಿಮುಕ್ತರಾ ಗುವುದಿಲ್ಲ.

ಈಗ, ಇನ್ನೊಬ್ಬ ಕೋಟ್ಯಾಧಿಪತಿಯು ನಿಮ್ಮ ಬಳಿಗೆ ಬರುತ್ತಾನೆ ಮತ್ತು ನಿಮ್ಮ ಸಾಲವನ್ನು ಪೂರ್ಣವಾಗಿ ತೀರಿಸುತ್ತಾನೆ ಎಂದು ಹೇಳುವನೆಂದು ಕಲ್ಪಿಸಿರಿ. "ನಿಮ್ಮ ಸಾಲವನ್ನು ಪೂರ್ತಿಯಾಗಿ ತೀರಿಸುವೆನು, ಹೀಗೆ ನೀವು ಇಂದಿನಿಂದ ಮುಂದೆ ಸಾಲವಿಲ್ಲದವರಾಗುರುವಿರಿ" ಎಂದು ಅವನು ಹೇಳುವನು. ಇದು ಎಲ್ಲಕ್ಕಿಂತ ಅತ್ಯುತ್ತಮವಾದ ಸಮಾಚಾರವಾಗಿರುವುದಲ್ಲವೇ? ಮೊದಲನೆಯವನು *ನಿರೀಕ್ಷ ಣೆಯಲ್ಲಿ* ಕ್ಷಮಾಪಣೆಯನ್ನು ಕೊಡಲು ಒಪ್ಪಿಕೊಳ್ಳುತ್ತಾನೆ, ಆದರೆ ಎರಡನೆಯವನು *ಯಥಾರ್ಥತೆಯಲ್ಲಿ* ಕ್ಷಮಾಪಣೆಯನ್ನು ಕೊಡಲು ಒಪ್ಪಿಕೊಳ್ಳುತ್ತಾನೆ; ಅವನು ನೂತನ ಜೀವನವನ್ನು, ಇಂದು ಪ್ರಾರಂಭಿಸುವುದರೊಂದಿಗೆ ಕೊಡುತ್ತಾನೆ.

ನಾವು ಯೇಸುಕ್ರಿಸ್ತನ ದೇಹದಲ್ಲಿ ನೀತಿನಿರ್ಣಯ ಹೊಂದಿದ ಜನರಂತೆ ಜೀವಿಸುತ್ತೇವೆ. ಹಿಂದಿನ ಎಲ್ಲಾ ಪಾಪಗಳಿಂದ ನಾವು ಶುದ್ಧೀಕರಿಲ್ಪಟ್ಟಿದ್ದೇವೆ (ರೋಮಾಪುರ 3:24), ಮತ್ತು ನಾವು ಮಾಡುವ ಪ್ರತಿ ದಿನದ ಪಾಪಗಳಿಂದ ಸತತವಾಗಿ ಶುದ್ಧೀಕರಿಸಲ್ಪಡುತ್ತೇವೆ (1 ಯೋಹಾನ 1:7), ಹೊಸ ಒಡಂಬಡಿಕೆಯ ಕ್ಷಮಾಪಣೆಯ ಮುಖಾಂತರ, ನಾವು ನಿರಂತರವಾಗಿ ಸಾಲವಿಲ್ಲದವರಾಗಿ ಮಾಡಲ್ಪಟ್ಟಿದ್ದೇವೆ. ಈ ಆಶೀರ್ವಾದವು ಮಾತ್ರವೇ ನಮ್ಮ ಹೃದಯಗಳಲ್ಲಿ ಸತತವಾಗಿ ಆನಂದದ ಸಂಗೀತವನ್ನು ಇಡುವುದು. ನಮ್ಮ ಕೃತಜ್ಞತೆಯೂ ಸಹ ನಮ್ಮ ವಿಮೋಚಕನ ನಿರಂತರ ಸೇವೆಗೆ ನಮ್ಮನ್ನು ಪ್ರೇರೇಪಿಸತಕ್ಕದ್ದು.

## ಒಂದು ನೂತನ ಅನ್ಯೋನ್ಯತೆ

ಎರಡು ಒಡಂಬಡಿಕೆಗಳ ಮಧ್ಯದಲ್ಲಿಯ ಮೂರನೆಯ ವ್ಯತ್ಯಾಸವು ಒಂದು ನೂತನ ಸಂಬಂಧ, ಹೊಸ ಒಡಂಬಡಿಕೆಯೊಳಗೆ ಪ್ರವೇಶಿಸುವವರಿಗೆ ಒದಗಿಸಲ್ಪಟ್ಟ ಒಂದು ನೂತನ ಅನ್ಯೋನ್ಯತೆಯಾಗಿರುತ್ತದೆ. "ಒಂದೇ ಊರಿನವರೂ ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು - ಕರ್ತನ ಜ್ಞಾನವನ್ನು ಪಡೆಯಿರಿ ಎಂದು ಬೋಧಿಸಬೇಕಾಗಿರುವದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು" (ಇಬ್ರಿಯ 8:11) ಎಂದು ದೇವರು ಹೇಳಿದನು.

ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ದೇವರೊಂದಿಗೆ ನಮ್ಮ ಸಂಬಂಧವು ಹಳೇ ಒಡಬಡಿಕೆಯು ಒದಗಿಸಿದ್ದಕ್ಕಿಂತ ಹೆಚ್ಚು ನಿಕಟವಾದದ್ದೂ, ವೈಯಕ್ತಿಕವಾದದ್ದೂ ಆಗಿರುತ್ತದೆ. ಸಭೆಯು ದೇವರ ವಾಸಸ್ಥಾನವಾಗಿದೆ.

ನೂತನ ಜನನವು ನಮ್ಮನ್ನು ನೂತನ ಆತ್ಮಿಕ ಅನ್ಯೋನ್ಯತೆಯಲ್ಲಿ ತರುತ್ತದೆ. ಹೊಸ ಒಡಬಡಿಕೆಯಲ್ಲಿರುವ ಪ್ರತಿಯೊಬ್ಬನು ದೇವರ ಕುಟುಂಬದೊಳಗೆ ಆತ್ಮಿಕ ಜನನದಿಂದ ಒಡಂಬಡಿಕೆಯೊಳಗೆ ಪ್ರವೇಶಿಸಲು ಆಯ್ದುಕೊಂಡಿದ್ದಾನೆ (ಯೋಹಾನ 3:5). ಹೀಗೆ ಹೊಸ ಒಡಂಬಡಿಕೆಯಲ್ಲಿ ಪ್ರತಿಯೊಬ್ಬ ವ್ಯಕ್ತಿಯು ದೇವರೊಂದಿಗೆ ತಂದೆ ಮಗುವಿನ ಸಂಬಂಧವನ್ನು ಕಾಪಾಡಿಕೊಳ್ಳುತ್ತಾರೆ (ಗಲಾತ್ಯ 4:6, 7). ಈ ಹೊಸ ಒಡಂಬಡಿಕೆಗೆ ಯೇಸುವು ಅಸ್ತಿವಾರವನ್ನು ಹಾಕಿದಾಗ, ಆತನು ತನ್ನ ಶಿಷ್ಯರಿಗೆ, "ಪರಲೋಕದಲ್ಲಿರುವ ನಮ್ಮ ತಂದೆಯೇ" (ಮತ್ತಾಯ 6:9) ಎಂದು ಪ್ರಾರ್ಥಿಸಲು ಕಲಿಸಿದನು. ಹೊಸ ಒಡಂಬಡಿಕೆಯು, ಎಲ್ಲಾ ಒಡಂಬಡಿಕೆಗಳಂತೆಯೇ, ನಿಯಮಗಳನ್ನು ಒಳಗೊಂಡಿರುತ್ತದೆ, ಆದರೆ ಅದರ ಕೇಂದ್ರದಲ್ಲಿ, ದೇವರೊಂದಿಗೆ ನಿಕಟವಾದ, ವೈಯಕ್ತಿಕ ಸಂಬಂಧವಿರುತ್ತದೆ.

ಒಬ್ಬ ಮಹಿಳೆ ಒಂದು ಪುಸ್ತಕವನ್ನು ಓದಿದಳು. ಅದು ಬೇಸರ ತರುವಂಥದ್ದೂ ಆಕೆಯ ಸಮಯವನ್ನು ಹಾಳುಮಾಡುವಂಥದ್ದೂ ಆಗಿರುವುದೆಂದು ಕಂಡುಕೊಂಡಳು. ಅನಂತರದಲ್ಲಿ ಆ ಪುಸ್ತಕದ ಗ್ರಂಥಕರ್ತನ ಹೆಸರಿನಂತೆ ಹೆಸರಿದ್ದ ಒಬ್ಬ ಮನುಷ್ಯನನ್ನು ಸಂದರ್ಶಿಸಿದಳು. ಮೊದಲು ಆ ಹೆಸರುಗಳಲ್ಲಿದ್ದ ಹೋಲಿಕೆಯನ್ನು ಗಮನಿಸಲಿಲ್ಲ; ಆದರೆ ಅವರು ಹತ್ತಿರಕ್ಕೆ ಬಂದು ಪ್ರೀತಿಸುವವರಾದಾಗ, ಆಕೆ, "ನಿಮ್ಮ ಹೆಸರಿನಂತೆ ಹೆಸರುಳ್ಳ ಒಬ್ಬ ಮನುಷ್ಯನು ಬರೆದ ಒಂದು ಪುಸ್ತಕವನ್ನು ಒಂದು ಸಲ ನಾನು ಓದಿದೆನು. ಆ ಗ್ರಂಥಕರ್ತನಿಗೆ ನೀವು ಸಂಬಂಧಿಸಿರುವಿರೋ?" ಎಂದು ಕೇಳಿದಳು. "ಹೌದು, ನಾನೇ ಆ ಮನುಷ್ಯನು, ನಾನೇ ಆ ಪುಸ್ತಕವನ್ನು ಬರೆದೆನು," ಎಂದು ಅವನು ಉತ್ತರ ಕೊಟ್ಟನು. ತನಗೆ ಸಾಧ್ಯವಾದಷ್ಟು ಬೇಗನೇ ಆಕೆ ಆ ಪುಸ್ತಕವನ್ನು ಪುನಃ ಓದಿದಳು; ಈ ಸಲ ಆಕೆ ತಾನು ಓದಿದ ಪುಸ್ತಕಗಳಲ್ಲಿ ಅದು ಬಹಳವಾಗಿ ಆಸಕ್ತಿಯುಳ್ಳ ಪುಸ್ತಕ

ವಾಗಿರುವುದಾಗಿ ಕಂಡುಕೊಂಡಳು! ಪುಸ್ತಕದ ಎರಡು ಓದುವಿಕೆಗಳಲ್ಲಿ ಭಿನ್ನತೆಯನ್ನು ಯಾವುದು ಮಾಡಿತ್ತು? "ಸಂಬಂಧ" ಎಂಬ ಪದದಲ್ಲಿ ಉತ್ತರವು ಕಂಡುಕೊಳ್ಳಲ್ಪಡುತ್ತದೆ. ಮೊದಲನೆಯ ಓದುವಿಕೆಯಲ್ಲಿ, ಆಕೆಗೆ ಪುಸ್ತಕದೊಂದಿಗೆ ಸಂಬಂಧವಿತ್ತು; ಎರಡನೆಯ ಸಲದ ಓದುವಿಕೆಯಲ್ಲಿ ಆಕೆಗೆ ಪುಸ್ತಕದ ಗ್ರಂಥಕರ್ತನೊಂದಿಗೆ ಸಂಬಂಧವಿತ್ತು. ಗ್ರಂಥಕರ್ತನೊಂದಿಗಿನ ಆ ಸಂಬಂಧವು ಆಕೆಯ ದೃಷ್ಟಿಕೋನವನ್ನು ಮತ್ತು ಆಕೆಯ ಆಸಕ್ತಿಯ ದೃಷ್ಟಿಕೋನವನ್ನು ಮತ್ತು ಆಕೆಯ ಆಸಕ್ತಿಯ ಮಟ್ಟವನ್ನು ಬದಲಾಯಿಸಿತು!

ಹಳೇ ಒಡಂಬಡಿಕೆಯು ಆ ಪುಸ್ತಕದ ಮೊದಲನೆಯ ಓದುವಿಕೆಯಂತೆ ಇತ್ತು, ಹಾಗೂ ಹೊಸ ಒಡಂಬಡಿಕೆಯು ಎರಡನೆಯ ಓದುವಿಕೆಯಂತೆ ಇರುತ್ತದೆ. ಹೊಸ ಒಡಂಬಡಿಕೆಯ ಅಧೀನತೆಯಲ್ಲಿ ನಮಗೆ ದೇವರೊಂದಿಗೆ ನಿಕಟವಾದ ಸಂಬಂಧವಿರುತ್ತದೆ. ಆತನು ನಮ್ಮ ಪರಲೋಕದ ತಂದೆಯು ಮತ್ತು ನಾವು ಆತನ ಮಕ್ಕಳು (ರೋಮಾಪುರ 8:17). ದೇವರು ಮತ್ತು ಆತನ ಕುಮಾರನು ನಮ್ಮ ಅನುದಿನದ ಜೊತೆಗಾರರಾಗಿದ್ದಾರೆ (1 ಯೋಹಾನ 1:3). ನಮ್ಮ ಅಂತರ್ಯದಲ್ಲಿ ಪರಿಶುದ್ಧಾತ್ಮನು ವಾಸಿಸುತ್ತಾನೆ (1 ಕೊರಿಂಥ 6:19), ನಾವು ದೇವರಿಗೆ ಪ್ರಾರ್ಥಿಸುತ್ತೇವೆ, ಆತನ ವಾಕ್ಯವನ್ನು ಅನುಸರಿಸುತ್ತೇವೆ ಮತ್ತು ಆತನ ಕೆಲಸವನ್ನು ದೇವರಿಗೆ, ಕುಮಾರನಿಗೆ ಮತ್ತು ಪರಿಶುದ್ಧಾತ್ಮನಿಗೆ ನಮ್ಮ ಸಂಬಂಧದಲ್ಲಿ ಆನಂದದಿಂದ ಮಾಡುತ್ತೇವೆ.

## ಮುಕ್ತಾಯ

ಸಭೆಯು ಹೊಸ ಒಡಂಬಡಿಕೆಯಿಂದ ಸೃಷ್ಟಿಸಲ್ಪಟ್ಟಿತು. ಅದರ ಅರ್ಥವಾಗಿ, ಸಭೆಯು ಹೊಸ ಹೃದಯಗಳು, ಒಂದು ನೂತನ ನಂಬಿಗಸ್ತಿಕೆ, ಒಂದು ನೂತನ ಕ್ಷಮಾಪಣೆಯಿತ್ತು, ದೇವರೊಂದಿಗೆ ಒಂದು ನೂತನ ಸಂಬಂಧ ಹಾಗೂ ಅನ್ಯೋನ್ಯತೆಯಿರುವ ಜನರ ಸಮುದಾಯದಂತೆ ದೃಷ್ಟಿಸಲ್ಪಡತಕ್ಕದ್ದು. ದೇವರ ಕುಟುಂಬದೊಳಗೆ ಆತ್ಮೀಕವಾಗಿ ಜನಿಸಿದವನಾಗಿರುವಂತೆ, ನಮಗೆ ಆತನ ನಿಯಮಗಳು ನಮ್ಮ ಹೃದಯಗಳಲ್ಲಿ ಬರೆಯಲ್ಪಟ್ಟಿರುತ್ತವೆ, ಪ್ರೀತಿಯ ಮುಖಾಂತರ ಕಾರ್ಯಮಾಡುವ ನಂಬಿಕೆಯಿಂದ ನಾವು ಆತನ ಚಿತ್ತವನ್ನು ಹುಡುಕುತ್ತೇವೆ (ಗಲಾತ್ಯ 5:6). ನಿಜವಾದ ಕ್ಷಮಾಪಣೆಯನ್ನು ಸ್ವೀಕರಿಸಿದವರ ಜನಾಂಗ ನಾವಾಗಿದ್ದೇವೆ, ನಮ್ಮ ಪಾಪ - ಸಾಲವು "ಪೂರ್ತಿಯಾಗಿ ಕೊಡಲ್ಪಟ್ಟಿದೆ." ದೇವರು ನಮ್ಮ ಪರಲೋಕದ ತಂದೆಯಾಗಿದ್ದಾನೆ, ಮತ್ತು ಯೇಸುವು ನಮ್ಮ ಹಿರಿಯ ಸಹೋದರನಾಗಿದ್ದಾನೆ. ಜೀವಿಸುವ ದೇವರ ಆತ್ಮನು ನಮ್ಮ ಅಂತರ್ಯದಲ್ಲಿ ವಾಸಿಸುತ್ತಾನೆ (ಗಲಾತ್ಯ 4:6).

ಹೊಸ ಒಡಂಬಡಿಕೆಗೆ ಸಾರ್ವತ್ರಿಕ ಅನ್ವಯವಿರುತ್ತದೆ, ಯಾಕಂದರೆ ಯೇಸುವು ಹೀಗೆ ಹೇಳಿದ್ದಾನೆ, "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ಬಾಪ್ತಿಸ್ಮ ಮಾಡಿಸಿಕೊಳ್ಳುವವನು ರಕ್ಷಣೆಹೊಂದುವನು; ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:15, 16). ಯಾವನಾದರೂ ರಕ್ಷಣೆಯ ದೇವರ ಸಂದೇಶವನ್ನು ಸ್ವೀಕರಿಸಿ, ಅದಕ್ಕೆ ನಂಬಿಕೆಯಿಂದ ಹಾಗೂ ವಿಧೇಯತೆಯಿಂದ ಉತ್ತರಕೊಟ್ಟರೆ, ಈ ಹೊಸ ಒಡಂಬಡಿಕೆಯನ್ನು ಪ್ರವೇಶಿಸುವನು ಮತ್ತು ದೇವರೊಂದಿಗೆ ಹಾಗೂ ಕ್ರಿಸ್ತನೊಂದಿಗೆ ಆತನ ಕುಟುಂಬದಂತೆ, ಇಲ್ಲವೇ ಸಭೆಯಂತೆ ಜೀವಿಸುವನು. ಅವನು ಒಡಂಬಡಿಕೆಯ ಭಾಗವಾಗುವನು ಮತ್ತು ಅದರ ಎಲ್ಲಾ ಆಶೀರ್ವಾದಗಳನ್ನು ಹೊಂದಿಕೊಳ್ಳುವನು.

ದೇವರೊಂದಿಗಿನ ಈ ಒಪ್ಪಂದವು ಯಾವುದೇ ಮನುಷ್ಯ ಜೀವಿಯು ಎಂದಾದರೂ

ಮಾಡಿಕೊಂಡ ಅತೀಮಹತ್ವದ ಒಪ್ಪಂದವಾಗಿರುತ್ತದೆ: ಅದು ಒಬ್ಬ ವ್ಯಕ್ತಿಯು ತನ್ನ ಮನಸ್ಸು ಮಾಡುವ ಅತೀ ಉನ್ನತವಾದ ಮತ್ತು ಉದಾತ್ತವಾದ ಉಪಯೋಗವಾಗಿದೆ. ವೈಯಕ್ತಿಕ ಒಪ್ಪಿಗೆಯಿಂದ, ಉಚಿದವಾದ ನೈತಿಕ ಆಯ್ಕೆಯಿಂದ, ನಿತ್ಯವಾದ ದೇವರೊಂದಿಗೆ ಒಂದೂ ತೀರದ ಒಡಂಬಡಿಕೆಯಲ್ಲಿ ಪ್ರವೇಶಿಸುತ್ತಾನೆ. ನಮ್ಮ ಹೆಚ್ಚಾದ ಒಪ್ಪಂದಗಳು ತಾತ್ಕಾಲಿಕವಾದವುಗಳಾಗಿದ್ದು, ಶರತ್ತುಗಳನ್ನು ಪೂರೈಸುತ್ತಿರುವವರೆಗೆ ಮಾತ್ರವೇ ಇರುತ್ತದೆ; ದೇವರೊಂದಿಗಿನ ಈ ಒಪ್ಪಂದವು ಜೀವನ ಬದಲಾಯಿಸುವಂಥದ್ದೂ ಅವಧಿಯಲ್ಲಿ ನಿತ್ಯವಾದದ್ದೂ ಆಗಿರುತ್ತದೆ.

ನಮ್ಮ ಜೀವನದ ಕೆಲಸವು ದೇವರ ಒಡಂಬಡಿಕೆಯನ್ನು ಅರ್ಥಮಾಡಿಕೊಳ್ಳುವುದು, ಈ ಹೊಸ ಒಡಂಬಡಿಕೆಯೊಳಗೆ ಬರುವುದು ಮತ್ತು ನಮ್ಮ ಭೂಲೋಕದ ಪ್ರಯಾಣಕ್ಕೆ ಅಂತ್ಯಕ್ಕೆ ಬರುವವರೆಗೆ ಆ ಒಡಂಬಡಿಕೆಯ ನಮ್ಮ ಭಾವವನ್ನು ನೆರವೇರಿಸುವುದು ಆಗಿರುತ್ತದೆ. ದೇವರ ಹೊಸ ಒಡಂಬಡಿಕೆಯನ್ನು ಪ್ರವೇಶಿಸಲು ನೀನು ಒಪ್ಪಿಕೊಂಡಿರುವಿಯೋ?

---

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಭಾವನೆಗಳಾಗಿರುವುದಕ್ಕೆ ಇಲ್ಲವೇ ಪ್ರವೃತ್ತಿಗಳಾಗಿರುವುದಕ್ಕೆ ಕ್ರೈಸ್ತ ಉತ್ತರವು ಯಾವುದಿರಬೇಕು?
2. ಕ್ರೈಸ್ತನು ಯಾವ ಸರಕಾರದ ಅಧೀನತೆಯಲ್ಲಿ ಜೀವಿಸುವನೋ ಅದರ ಕಡೆಗೆ ಅವನ ಜವಾಬ್ದಾರಿಕೆಗಳು ಯಾವವು?
3. ಕ್ರೈಸ್ತನಿಗೆ ಯಾವ ಎರಡು ನಾಗರಿಕತ್ವಗಳು ಇರುವವು? ಮತ್ತು ಅವನ ಪ್ರಾಧಾನ್ಯತೆಗಳು ಯಾವವು? ಯಾವ ನಾಗರಿಕತ್ವವು ಹೆಚ್ಚು ಮಹತ್ವವುಳ್ಳದ್ದು?
4. ದೇವರು ತನ್ನ ಜನರೊಂದಿಗೆ ತನ್ನ ನಿಯಮವನ್ನು ಇಲ್ಲವೇ ಒಡಂಬಡಿಕೆಯನ್ನು ಬದಲಾಯಿಸಿರುವನೋ? ನಿಮ್ಮ ಉತ್ತರವನ್ನು ಸಿದ್ಧಪಡಿಸಿ ತೋರಿಸಲು ಒಂದು ವಾಕ್ಯಭಾಗವನ್ನು ಹೇಳಿರಿ.
5. ಇಸ್ರಾಯೇಲ್ಯರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯಲ್ಲಿ ಒಬ್ಬ ಯೆಹೂದ್ಯನು ಹೇಗೆ ಪ್ರವೇಶಿಸಿದನು?
6. ತನ್ನ ಜನರೊಂದಿಗೆ ದೇವರು ಮಾಡಿಕೊಂಡ ಒಡಂಬಡಿಕೆಯಲ್ಲಿ ಇಂದು ಕ್ರೈಸ್ತನು ಹೇಗೆ ಪ್ರವೇಶಿಸುವನು.
7. ನಿನ್ನ ಹೃದಯದ ಮೇಲೆ ಬರೆಯಲ್ಪಟ್ಟ ಒಂದು ಸಯಮದ ವೈಯಕ್ತಿಕ ದೃಷ್ಟಾಂತವನ್ನು ಕೊಡು.
8. ಹಳೇ ಒಡಂಬಡಿಕೆಯ ದಿನಗಳಲ್ಲಿ ದೇವರು ತನ್ನ ಜನರಿಗೆ ಹೇಗೆ ಕ್ಷಮಾಪಣೆಯನ್ನು ದಯಪಾಲಿಸಿದನು?
9. ದೇವರು ಇಂದು ಕೊಡುವ ಕ್ಷಮಾಪಣೆಯನ್ನು ಆತನು ಹಳೇ ಒಡಂಬಡಿಕೆಯ ಸಮಯಗಳಲ್ಲಿ ಆತನು ಕೊಟ್ಟ ಕ್ಷಮಾಪಣೆಯೊಂದಿಗೆ ಹೋಲಿಸಿರಿ.
10. ಪಾಪದಿಂದ ರಕ್ಷಣೆಯ ಹೊಸ ಒಡಂಬಡಿಕೆಯ ಹಿನ್ನೆಲೆಯಲ್ಲಿ ಉಪಯೋಗಿಸದಂತೆ "ನೀತಿನಿರ್ಣಯ ಹೊಂದಿರುವುದು" ಎಂಬ ಪದವನ್ನು ವಿವರಿಸಿರಿ.
11. ''ಕರ್ತನನ್ನು ತಿಳಿಯುವುದನ್ನು'' ಒಬ್ಬರೊಬ್ಬರಿಗೆ ಬೋಧಿಸುವುದು ಹಳೇ ಒಡಂಬಡಿಕೆಯ ಕುಟುಂಬಕ್ಕೆ ಯಾಕೆ ಅಗತ್ಯವಾಗಿತ್ತು?
12. ಹೊಸ ಒಡಂಬಡಿಕೆಯಲ್ಲಿ ದೇವರೊಂದಿಗೆ ಕ್ರೈಸ್ತನ ಸಂಬಂಧವನ್ನು ನೀನು ಹೇಗೆ ವಿವರಿಸುವಿ?
13. ಹೊಸ ಒಡಂಬಡಿಕೆಯು ಸಾರ್ವತ್ರಿಕ ಅನ್ವಯಕ್ಕಾಗಿ ಉದ್ದೇಶಿಸಲ್ಪಟ್ಟಿರುವುದನ್ನು

ತೋರಿಸಲು ಹೊಸ ಒಡಂಬಡಿಕೆಯ ಪರಿಶುದ್ಧ ಬರಹಗಳನ್ನು ಉಪಯೋಗಿಸಿರಿ.

14. ಒಬ್ಬನು ಮಾಡುವ ಅತೀ ಉನ್ನತವಾದ ಮತ್ತು ಅತ್ಯುತ್ತಮವಾದ ಮನಸಿನ ಉಪಯೋಗವು ಯಾವುದು?

© 2009 Truth for Today